**ದಿನಾಂಕ: 10-06-2011ರಂದು ಅಪರಾಹ್ನ: 02-00 ಗಂಟೆಗೆ ಹೊಯ್ಸಳ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

ಅಧ್ಯಕ್ಷತೆ: ಶ್ರೀ ಹುಚ್ಚೇಗೌಡ,
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ.

ಹಾಜರಿ :07 ಗೈರು ಹಾಜರಿ:00

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td></td><td></td><td>ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಸಭೆಗೆ ಹಾಜರಿದ್ದ ಮಾನ್ಯ ಅಧ್ಯಕ್ಷರು, ಸಮಿತಿ ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು.</td><td></td></tr>
<tr><td>1</td><td>ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿಯ ವ್ಯಾಪ್ತಿಗೊಳಪಡುವ ವಿವಿಧ ಇಲಾಖೆಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡುವ ಬಗ್ಗೆ.</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋವಿ(3)ಕೃಷಿಕೈಗರಿಕೆ ಕ್ರಿ.ಯೋ/40/2010-11 ದಿನಾಂಕ: 04-06-2011.<br>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹೊಸದಾಗಿ ಸ್ಥಾಯಿ ಸಮಿತಿ ರಚನೆಯಾದ ನಂತರ ನಡೆಸುತ್ತಿರುವ ಮೊದಲ ಸಭೆ ಇದಾಗಿರುತ್ತದೆ. ಆದ್ದರಿಂದ, ಎಲ್ಲಾ ಇಲಾಖಾ ಅಧಿಕಾರಿಗಳು ತಮ್ಮ ತಮ್ಮ ವ್ಯಾಪ್ತಿಯ ಕಾರ್ಯಕ್ರಮಗಳ ಬಗ್ಗೆ ಸಭೆಗೆ ಮಾಹಿತಿ ನೀಡಬೇಕೆಂದು ಸೂಚಿಸಿದರು.<br>ವಿವಿಧ ಇಲಾಖಾ ಅಧಿಕಾರಿಗಳು ಈ ಕೆಳಗಿನಂತೆ ತಮ್ಮ ಇಲಾಖಾ ವ್ಯಾಪ್ತಿಯ ಮಾಹಿತಿಯನ್ನು ನೀಡಿದರು.<br>1. <u>ಕೃಷಿ ಇಲಾಖೆ:</u><br>ಜಂಟಿ ಕೃಷಿ ನಿರ್ದೇಶಕರು ಮಾತನಾಡುತ್ತಾ, ಕೃಷಿ ಇಲಾಖೆಗೆ 2011-12ನೇ ಸಾಲಿಗೆ ಯೋಜನಾ ಕಾರ್ಯಕ್ರಮಗಳ ಅಡಿಯಲ್ಲಿ ಲಿಂಕ್ ಪುಸ್ತಕದ ಪ್ರಕಾರ ಈ ಕೆಳಗಿನಂತೆ ಅನುದಾನ ನಿಗದಿಪಡಿಸಲಾಗಿದೆ ಎಂದು ವಿವರಿಸಿದರು.<br>
<table>
<tr><th>ಕ್ರಸಂ</th><th>ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು</th><th>ನಿಗದಿತ ಅನುದಾನ (ಲಕ್ಷ ರೂಗಳಲ್ಲಿ)</th></tr>
<tr><td>1</td><td>2435-00-101-0-34<br>ಕೃಷಿ ಕ್ಷೇತ್ರ ಮತ್ತು ಅಭಿವೃದ್ಧಿ ಕೇಂದ್ರಗಳು</td><td>1.50</td></tr>
<tr><td>2</td><td>2435-00-101-0-34<br>ಸಾವಯವ ಗೊಬ್ಬರಗಳು</td><td>5.00</td></tr>
<tr><td>3</td><td>2435-00-101-0-29<br>ಇತರೆ ಕೃಷಿ ಯೋಜನೆಗಳು</td><td>25.00</td></tr>
</table></td><td>ಸಭೆಯಲ್ಲಿ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿಯ ವ್ಯಾಪ್ತಿಗೊಳಪಡುವ ವಿವಿಧ ಇಲಾಖೆಗಳ ಕ್ರಿಯಾ ಯೋಜನೆ ಕುರಿತಂತೆ ಸಮಗ್ರವಾಗಿ ಪರಿಶೀಲಿಸಲಾಯಿತು.<br><br>2011-12ನೇ ಸಾಲಿಗೆ ಸರ್ಕಾರದಿಂದ ಯೋಜನಾ ಕಾರ್ಯಕ್ರಮಗಳಿಗೆ ಕೃಷಿ ಇಲಾಖೆಗೆ ನಿಗದಿಯಾಗಿರುವ ಅನುದಾನದ ಬಗ್ಗೆ ಸುದೀರ್ಘವಾಗಿ ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು<br>1. ಕೃಷಿ ಇಲಾಖೆಯಡಿ ರಿಯಾಯಿತಿ ದರದಲ್ಲಿ ನೀಡುವ ಬಿತ್ತನೆ ಬೀಜಗಳಿಗೆ ಸಂಬಂಧಿಸಿದಂತೆ, ರೈತರು ಯಾವ ಸಂಸ್ಥೆಯಿಂದ ಬಿತ್ತನೆ ಬೀಜಗಳನ್ನು ಖರೀದಿಸುತ್ತಾರೆ ಅಂತಹ ಬಿತ್ತನೆ ಬೀಜಗಳಿಗೆ ಶೇ.50ರಷ್ಟು ರಿಯಾಯಿತಿಯನ್ನು ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.</td></tr>
</table>

| | | |
|---|---|---|
| 4 | 2435-00-101-0-01<br>ನೂತನ ವಿಸ್ತೃತ ನಿರ್ವಹಣಾ ಮಾದರಿಯಡಿ ಕೃಷಿ ಅಭಿವೃದ್ಧಿ | 90.00 |
| 5 | 2435-00-101-0-233<br>ಕೃಷಿ ಕಛೇರಿ ಕಟ್ಟಡಗಳು | 20.00 |
| 6 | 2435-00-101-0-31<br>ಬೇಸಾಯ ಸಂಬಂಧಿತ ಚಟುವಟಿಕೆಗಳು | 10.00 |
| 7 | 2435-00-101-0-03<br>ಎಣ್ಣೆ ಬೀಜಗಳ ಉತ್ಪತ್ತಿ ಯೋಜನೆ | 12.00 |
| 8 | 2435-00-101-0-30<br>ಹನಿ ನೀರಾವರಿ ಯೋಜನೆ | 25.00 |
| | **ಒಟ್ಟು** | **188.50** |

ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಕೃಷಿ ಇಲಾಖೆಯಲ್ಲಿ ಯಾವ ಯಾವ ಬೀಜೋತ್ಪಾದನೆ ಮಾಡಲಾಗುತ್ತಿದೆ ಎಂಬ ಬಗ್ಗೆ ವಿವರ ನೀಡಬೇಕೆಂದು ಜಂಟಿ ನಿರ್ದೇಶಕರಿಗೆ ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕರು ಉತ್ತರಿಸುತ್ತಾ, ಹಾಸನ ಜಿಲ್ಲೆಯಲ್ಲಿ ಐಆರ್-64 ತಳಿಯ ಭತ್ತದ ಬೀಜವನ್ನು ಉತ್ಪಾದನೆ ಮಾಡಲಾಗುತ್ತಿದೆ ಎಂದು ವಿವರ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗೆ ಸಂಬಂಧಿಸಿದಂತೆ, ಸರ್ಕಾರದಿಂದ ಎಲ್ಲಾ ಸಂಸ್ಥೆಗಳಿಗಿಂತ ಕಡಿಮೆ ಬೆಲೆ ಇರುವ ಬಿತ್ತನೆ ಬೀಜಕ್ಕೆ ಶೇ.50ರಷ್ಟು ರಿಯಾಯಿತಿಯನ್ನು ನೀಡುತ್ತಾರೆ. ಆದರೆ, ರೈತರು ಹೆಚ್ಚಿನ ಬೆಲೆಯನ್ನು ನೀಡಿ ಬೇರೆ ಸಂಸ್ಥೆಯ ಬೀಜಗಳನ್ನು ಖರೀದಿಸಿದಲ್ಲಿ ಅಂತಹ ಬೀಜಗಳಿಗೆ ಶೇ.50ರಷ್ಟು ರಿಯಾಯಿತಿ ನೀಡುವುದಿಲ್ಲ. ಇದರಿಂದ, ರೈತರಿಗೆ ಯಾವುದೇ ಅನುಕೂಲವಾಗುವುದಿಲ್ಲ. ಆದ್ದರಿಂದ, ರೈತರು ಖರೀದಿಸುವ ಯಾವುದೇ ಸಂಸ್ಥೆಯ ಬಿತ್ತನೆ ಬೀಜಗಳಿಗೆ ಶೇ.50ರಷ್ಟು ರಿಯಾಯಿತಿಯನ್ನು ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ರಸಗೊಬ್ಬರವನ್ನು ಸಾಗಾಣೆ ಮಾಡಲು ಲಾರಿಗಳು ಇಲ್ಲವೆಂದು ಫೆಡರೇಷನ್ ಅಧಿಕಾರಿಗಳು ಹೇಳುತ್ತಿದ್ದಾರೆ. ಇದರಿಂದ, ರಸಗೊಬ್ಬರದ ಸಾಗಾಣಿಕೆ ಮಾಡಲು ತೊಂದರೆಯಾಗುತ್ತಿದೆ. ಆದ್ದರಿಂದ, ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕೆಂದು ಕೋರಿದರು.

2. ಕೃಷಿ ಇಲಾಖೆಯಿಂದ ನೀಡುವ ಪವರ್ ಟಿಲ್ಲರ್, ಡೀಸಲ್ ಪಂಪ್‌ಸೆಟ್ ಹಾಗೂ ಹೈಟೆಕ್ ಕೃಷಿ ಉಪಕರಣಗಳನ್ನು ಮಾರುಕಟ್ಟೆಯಲ್ಲಿ ಬೇರೆ ಕಂಪನಿಯಿಂದ ರಿಯಾಯಿತಿಯನ್ನು ಹೊರತು ಪಡಿಸಿಯೂ ಅದೇ ದರಕ್ಕೆ ಉತ್ತಮ ಗುಣಮಟ್ಟದಲ್ಲಿ ಖರೀದಿಸಬಹುದೆಂದು ರೈತರು ತಿಳಿಸಿರುತ್ತಾರೆ. ಆದ್ದರಿಂದ, ರೈತರು ಮಾರುಕಟ್ಟೆ ಯಲ್ಲಿ ತಮಗೆ ಬೇಕಾದ ಕಂಪನಿಯಿಂದ ಅಗತ್ಯಕ್ಕೆ ತಕ್ಕಂತೆ ಪವರ್ ಟಿಲ್ಲರ್, ಡೀಸಲ್ ಪಂಪ್‌ಸೆಟ್ ಹಾಗೂ ಹೈಟೆಕ್ ಕೃಷಿ ಉಪಕರಣಗಳಿಗೆ ಶೇ.50ರಷ್ಟು ರಿಯಾಯಿತಿ ದರದಲ್ಲಿ ಖರೀದಿಸಲು ರೈತರಿಗೆ ಅವಕಾಶ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.
3. ಸುದೀರ್ಘವಾಗಿ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

ಜಂಟಿ ನಿರ್ದೇಶಕರು ಮಾತನಾಡುತ್ತಾ, ರಸಗೊಬ್ಬರ ವಿತರಣೆಗೆ ಸಂಬಂಧಿಸಿದಂತೆ, ಇಲಾಖೆಯ ವತಿಯಿಮದ ನಿಯಂತ್ರಣದಲ್ಲಿಡಲು ಸಾಧ್ಯವಾಗುವುದಿಲ್ಲ. ಮಾನ್ಯ ಜಿಲ್ಲಾಧಿಕಾರಿಯವರು ರಸಗೊಬ್ಬರದ ತಯಾರಕರು, ರೈಲ್ವೆ ಇಲಾಖೆಯ ಅಧಿಕಾರಿಗಳ ಸಭೆಯನ್ನು ದಿನಾಂಕ: 15-06-2011ರಂದು ಕರೆಯಲಾಗಿದ್ದು, ಈ ಬಗ್ಗೆ ಸಭೆಯ ಗಮನಕ್ಕೆ ತರುವುದಾಗಿ ತಿಳಿಸಿದರು. ಅಲ್ಲದೆ, ಫೆಡರೇಷನ್ ಅಧಿಕಾರಿಗಳಿಗೆ ಈಗಾಗಲೇ ನಿರ್ದೇಶನವನ್ನು ನೀಡಿ, ರಸಗೊಬ್ಬರದ ಎತ್ತುವಳಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಲಾಗಿದೆ ಎಂದು ಸಭೆಯ ಮಾಹಿತಿ ನೀಡಿದರು.

ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ರಸಗೊಬ್ಬರಕ್ಕೆ ಸಂಬಂಧಿಸಿದಂತೆ, ಸಹಕಾರ ಸಂಘದವರನ್ನು ಕೇಳಿದರೆ, ಫೆಡರೇಷನ್ನಿನವರು ರಸಗೊಬ್ಬರವನ್ನು ನೀಡುತ್ತಿಲ್ಲವೆಂದು ಹೇಳುತ್ತಾರೆ. ಆದರೆ, ಫೆಡರೇಷನ್ನಿನ ಅಧಿಕಾರಿಗಳು ಸಹಕಾರ ಸಂಘದವರು ರಸಗೊಬ್ಬರವನ್ನು ಎತ್ತುವಳಿ ಮಾಡುತ್ತಿಲ್ಲವೆಂದು ಹೇಳುತ್ತಾರೆ. ಈ ರೀತಿ ಆಗಲು ಕಾರಣ ಏನು ಎಂಬ ಬಗ್ಗೆ ವಿವರಗಳನ್ನು ನೀಡುವಂತೆ ಜಂಟಿ ನಿರ್ದೇಶಕರಿಗೆ ತಿಳಿಸಿದರು.

ಜಂಟಿ ನಿರ್ದೇಶಕರು ಮಾತನಾಡುತ್ತಾ, ರಸಗೊಬ್ಬರದ ವಿತರಣೆ ಸಂಬಂಧಿಸಿದಂತೆ, ಯಾವ ಯಾವ ಸಹಕಾರ ಸಂಘದವರು ರಸಗೊಬ್ಬರವನ್ನು ಎತ್ತುವಳಿ ಮಾಡಿದ್ದಾರೆ ಎಂಬ ಬಗ್ಗೆ ವಿವರಗಳನ್ನು ನೀಡುವುದಾಗಿ ಸಭೆಗೆ ವಿವರ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ಸಹಕಾರ ಸಂಘಗಳವರು ರಸಗೊಬ್ಬರವನ್ನು ಎತ್ತುವಳಿ ಮಾಡಲು ಬರಬೇಕಾದಲ್ಲಿ ಅವರ ಟಿ.ಎ/ಡಿ.ಎ ಮತ್ತು ಸಾಗಾಣಿಕೆ ವೆಚ್ಚವನ್ನು ರಸಗೊಬ್ಬರದ ಮಾರಾಟ ದರದಲ್ಲಿ ಸೇರಿಸುವ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ಕೋರಿದರು.

ಜಂಟಿ ನಿರ್ದೇಶಕರು ಮಾತನಾಡುತ್ತಾ, ಸಹಕಾರ ಸಂಘಗಳ ಮೂಲಕ ಎತ್ತುವಳಿ ಮಾಡುವ ರಸಗೊಬ್ಬರಕ್ಕೆ ಸಂಬಂಧಿಸಿದಂತೆ, ಹೆಚ್ಚಿನ ದರವನ್ನು ಅಧಿಕೃತವಾಗಿ ಬಿಲ್ ಹಾಕುವಂತಿಲ್ಲ. ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರು ಸಭೆಯನ್ನು ಕರೆದು ಸಾಗಾಣಿಕೆ ವೆಚ್ಚವನ್ನು ರಸಗೊಬ್ಬರದ ಮಾರಾಟದರದಲ್ಲಿ ಸೇರಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿದ್ದಾರೆಂದು ಸಭೆಗೆ ವಿವರ ನೀಡಿದರು.

ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಕೃಷಿ ಇಲಾಖೆಯಿಂದ ನೀಡುವ ಪವರ್ ಟಿಲ್ಲರ್, ಡೀಸಲ್ ಪಂಪ್‌ಸೆಟ್ ಹಾಗೂ ಹೈಟೆಕ್ ಕೃಷಿ ಉಪಕರಣಗಳಿಗೆ ಸರ್ಕಾರದಿಂದ ನೀಡುವ ರಿಯಾಯಿತಿಯನ್ನು ಪಡೆಯಲು ಸರ್ಕಾರದಿಂದ ದರಗುತ್ತಿಗೆ ಹೊಂದಿರುವ ಸಂಸ್ಥೆಯವರಿಂದ ಖರೀದಿಸಬೇಕಾಗಿರುತ್ತದೆ. ಆದರೆ, ರೈತರು ಮಾರುಕಟ್ಟೆಯಲ್ಲಿ ಬೇರೆ ಕಂಪನಿಯಿಂದ ರಿಯಾಯಿತಿಯನ್ನು ಹೊರತು ಪಡಿಸಿಯೂ ಅದೇ ದರಕ್ಕೆ ಉತ್ತಮ ಗುಣಮಟ್ಟದಲ್ಲಿ ಸಿಗುತ್ತಿವೆಯೆಂದು ತಿಳಿಸಿರುತ್ತಾರೆ. ಇದರಿಂದ ರೈತರಿಗೆ ಸರ್ಕಾರದಿಂದ ನೀಡುವ ರಿಯಾಯಿತಿಯಿಂದ ಯಾವುದೇ ಉಪಯೋಗವಾಗುತ್ತಿಲ್ಲ.

ಆದ್ದರಿಂದ, ರೈತರು ಮಾರುಕಟ್ಟೆಯಲ್ಲಿ ತಮಗೆ ಬೇಕಾದ ಕಂಪನಿಯಿಂದ ಖರೀದಿಸುವ ಪವರ್ ಟಿಲ್ಲರ್, ಡೀಸಲ್ ಪಂಪ್‌ಸೆಟ್ ಹಾಗೂ ಹೈಟೆಕ್ ಕೃಷಿ ಉಪಕರಣಗಳಿಗೆ ಶೇ.50ರಷ್ಟು ರಿಯಾಯಿತಿಯನ್ನು ನೀಡಿದಲ್ಲಿ ಅನುಕೂಲವಾಗುತ್ತದೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಿಳಿಸಿದರು.

ಮುಂದುವರೆದು, ಮಡೆನೂರು ಕೃಷಿ ವಿಜ್ಞಾನ ಕೇಂದ್ರದಲ್ಲಿ ನಿರ್ಮಿಸುತ್ತಿರುವ ರೈತ ಮಾಹಿತಿ ಕೇಂದ್ರಕ್ಕೆ ಜಿಲ್ಲಾ ಪಂಚಾಯಿತಿಯಿಂದ ಯಾವ ಯಾವ ದಿನಾಂಕಗಳಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎಂಬ ಬಗ್ಗೆ ವಿವರಗಳನ್ನು ನೀಡುವಂತೆ ತಿಳಿಸಿದರು.

2. **ಪಶುಪಾಲನೆ ಇಲಾಖೆ:**

ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಇಲಾಖೆಯ ಯೋಜನೆಗಳ ಬಗ್ಗೆ ವಿವರಗಳನ್ನು ಸಭೆಗೆ ಈ ಕೆಳಕಂಡಂತೆ ನೀಡಿದರು

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2403-00-101-0-28<br>ಕಟ್ಟಡಗಳು | 20.00 |
| 2 | 2403-00-101-0-29<br>ಜಾನುವಾರು ಆಸ್ಪತ್ರೆಯಲ್ಲಿ ಪಾಲಿಕ್ಲಿನಿಕ್ ಸ್ಥಾಪನೆ | 4.00 |
| 3 | 2403-00-101-0-27<br>ಔಷಧಗಳು, ರಾಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು | 50.00 |
| 4 | 2403-00-101-0-31<br>ಗಿರಿರಾಜ ಹಾಗೂ ಇತರೆ ಹಕ್ಕಿಗಳ ಸಾಕಾಣೆ | 4.00 |
| 5 | 2403-00-101-0-30<br>ವಿಸ್ತರಣಾ ಘಟಕಗಳ ಬಲಪಡಿಸುವಿಕೆ | 5.00 |
| | ಒಟ್ಟು | **83.00** |

ಪ್ರಸಕ್ತ ಸಾಲಿಗೆ ಕಟ್ಟಡಗಳು ಯೋಜನೆಯಡಿಯಲ್ಲಿ ನಿಗದಿಪಡಿಸಿರುವ ಅನುದಾನದಲ್ಲಿ ಆರ್.ಐ.ಡಿ.ಎಫ್-12ರ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಪಶುಚಿಕಿತ್ಸಾ ಕಾಮಗಾರಿಗಳಲ್ಲಿ 5 ಕಾಮಗಾರಿಗಳಿಗೆ ಟೆಂಡರ್ ಪ್ರೀಮಿಯಂ ಹಣವನ್ನು ನೀಡಲು ರೂ.8.00ಲಕ್ಷಗಳನ್ನು ನಿಗದಿಪಡಿಸಿಕೊಡಬೇಕೆಂದು ಸಭೆಯಲ್ಲಿ ಕೋರಿದರು.

ಪಶುಪಾಲನಾ ಇಲಾಖೆಯ ವಿವಿಧ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಹಾಗೂ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಅಲ್ಲದೆ, ಕಟ್ಟಡ ಕಾಮಗಾರಿಗಳು ಹಾಗೂ ರಿಪೇರಿ ಕಾಮಗಾರಿಗಳ ಅನುದಾನವನ್ನು ಸಮಿತಿಯ ಎಲ್ಲಾ ಸದಸ್ಯರ ಅಭಿಪ್ರಾಯ ಪಡೆದು ಅನುಷ್ಠಾನಗೊಳಿಸುವ ಷರತ್ತನ್ನು ಇಲಾಖಾಧಿಕಾರಿಗಳಿಗೆ ನೀಡಿ ಉಳಿದಂತೆ, ನಿಯಮಾನುಸಾರ ಅನುಷ್ಠಾನಗೊಳಿಸಲು ಸೂಚಿಸಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

3. **ತೋಟಗಾರಿಕೆ ಇಲಾಖೆ:**

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಹಾಸನ ಇವರು ತಮ್ಮ ಇಲಾಖೆಗೆ 2011-12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಕಾರ್ಯಕ್ರಮವಾರು ಕೆಳಗಿನಂತೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2435-00-101-0-28<br>ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ ಸಹಾಯಧನ | 10.00 |
| 2 | 2435-00-101-0-36<br>ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ | 6.00 |
| 3 | 2435-00-101-0-38<br>ಪ್ರಚಾರ ಮತ್ತು ಸಾಹಿತ್ಯ | 5.00 |
| 4 | 2435-00-101-0-35<br>ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ | 5.00 |
| 5 | 2435-00-101-0-32<br>ಕಟ್ಟಡಗಳು | 15.00 |
| 6 | 2435-00-101-0-39<br>ಶೈತ್ಯಾಗಾರಿಕೆಗೆ ಸಹಾಯಧನ | 6.00 |
| 7 | 2435-00-101-0-02<br>ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆಯ ವ್ಯವಸಾಯ | 3.00 |
| | ಒಟ್ಟು | 50.00 |

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹನಿ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ, ಯಾವ ರೀತಿ ಸಹಾಯಧನವನ್ನು ನೀಡಲಾಗುತ್ತದೆ ಎಂಬ ಬಗ್ಗೆ ವಿವರ ನೀಡುವಂತೆ ಉಪ ನಿರ್ದೇಶಕರಿಗೆ ತಿಳಿಸಿದರು.

ಉಪ ನಿರ್ದೇಶಕರು ಮಾತನಾಡುತ್ತಾ, ಆನ್‌ಲೈನ್‌ನಲ್ಲಿ ಫಲಾನುಭವಿಗಳ ಹೆಸರು ವಿಳಾಸವನ್ನು ದಾಖಲು ಮಾಡಿ ಹನಿ ನೀರಾವರಿಗೆ ಸಹಾಯಧನವನ್ನು ನೀಡಲಾಗುತ್ತಿದೆ ಅಲ್ಲದೆ, ಹಿಂದಿನ 8 ವರ್ಷಗಳಲ್ಲಿ ಫಲಾನುಭವಿಗಳಿಗೆ ನೀಡಿರುವ ಸಹಾಯಧನದ ಬಗ್ಗೆ ಫಲಾನುಭವಿಗಳ ಪಟ್ಟಿಯನ್ನು ಆನ್‌ಲೈನ್‌ನಲ್ಲಿ ಅಳವಡಿಸಲಾಗಿದೆ ಎಂದು ಸಭೆಗೆ ವಿವರ ನೀಡಿದರು.

ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಹಾಗೂ 2011-12ನೇ ಸಾಲಿನ ಲಿಂಕ್ ಪುಸ್ತಕದ ಗುರಿಗಳಿಗೆ ಅನುಮೋದನೆ ನೀಡಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಹಾಗೂ ಇಲಾಖಾಧಿಕಾರಿಗಳು ನಿಯಮಾನುಸಾರ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.

ಮತ್ತು ಹನಿ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ, ಫಲಾನುಭವಿಗಳಿಗೆ ಸಹಾಯಧನ ನೀಡುವಾಗ ಆಯಾ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಮಾನ್ಯ ಸದಸ್ಯರ ಗಮನಕ್ಕೆ ತಂದು ಕಾರ್ಯಕ್ರಮವನ್ನು ಅನುಷ್ಠಾನ ಮಾಡಬೇಕೆಂದು ಸಭೆಯಲ್ಲಿ ಇಲಾಖಾ ಅಧಿಕಾರಿಗಳಿಗೆ ಸೂಚಿಸಿ ನಿರ್ಣಯಿಸಲಾಯಿತು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹನಿ ನೀರಾವರಿಗೆ ಫಲಾನುಭವಿಗಳಿಗೆ ಸಹಾಯಧನ ನೀಡುವಾಗ ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರ ಗಮನಕ್ಕೆ ತಂದು ಕಾರ್ಯಕ್ರಮವನ್ನು ಅನುಷ್ಠಾನ ಮಾಡಬೇಕೆಂದು ತಿಳಿಸಿದರು. ಮತ್ತು ಹಿಂದೆ ನೀಡಿರುವ ಫಲಾನುಭವಿಗಳ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕೆಂದು ತಿಳಿಸಿದರು.

4. **ರೇಷ್ಮೆ ಇಲಾಖೆ:**

ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2011-12ನೇ ಸಾಲಿಗೆ ರೇಷ್ಮೆ ಇಲಾಖೆಗೆ ಲಿಂಕ್ ಪುಸ್ತಕದ ಪ್ರಕಾರ ಈ ಕೆಳಗಿನಂತೆ ಅನುದಾನ ನಿಗದಿಪಡಿಸಲಾಗಿದೆ ಎಂದು ಸಭೆಯಲ್ಲಿ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2851-00-104-0-30<br>ರೇಷ್ಮೆ ಬೆಳೆಗಾರರಿಗೆ ಸಹಾಯ | 19.30 |
| 2 | 2851-00-104-0-35<br>ಸಲಹಾ ಸೇವೆಗಳು, ಪ್ರದರ್ಶನ ಪ್ರಚಾರ, ಕ್ಷೇತ್ರೋತ್ಸವ, ದೃಶ್ಯ ಮತ್ತು ಶ್ರವ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳು | 3.00 |
| 3 | 2851-00-104-0-36<br>ತರಬೇತಿ | 4.00 |
| 4 | 2851-00-104-0-38<br>ಕ್ಷೇತ್ರಗಳು | 2.00 |
| | ಒಟ್ಟು | 28.30 |

ಸಭೆಯಲ್ಲಿ ರೇಷ್ಮೆ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2011-12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

5. **ಮೀನುಗಾರಿಕೆ ಇಲಾಖೆ:**

ಮೀನುಗಾರಿಕಾ ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2011-12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2405-00-101-0-28<br>ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ | 8.00 |

ಸಭೆಯಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2011-12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

| | | |
|---|---|---|
| 2 | 2405-00-101-0-27<br>ಮೀನುಗಾರಿಕೆ ಕಟ್ಟಡಗಳು ಸೌಲಭ್ಯಗಳ ನಿರ್ಮಾಣ | 10.00<br>2.00 |
| 3 | 2405-00-101-0-30<br>ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ | 1.0 |
| 4 | 2405-00-101-0-32<br>ಪ್ರದರ್ಶನ ಮತ್ತು ತರಬೇತಿ | 1.50 |
| 5 | 2405-00-102-0-02<br>ಕೇಂರ ಮೀನು ಸಾಕಾಣಿದಾರರ ಅಭಿವೃದ್ದಿ ಸಂಸ್ಥೆ ನೆರವು | 26.40<br>(ರಾಜ್ಯ.22.00<br>ಕೇಂದ್ರ. 4.40) |
| | **ಒಟ್ಟು** | **48.90** |

### 6. ಕೈಮಗ್ಗ ಮತ್ತು ಜವಳಿ ಇಲಾಖೆ:

ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2011-12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2851-00-107-0-31<br>ಕೈಮಗ್ಗ ಉದ್ದಿಮೆಗಳಿಗೆ ಸಹಾಯಧನ<br>ಅ) ಕೈಮಗ್ಗ ನೇಯ್ಗೆ ತರಬೇತಿ ರೂ.2.25 ಲಕ್ಷಗಳು<br>ಆ) ಕೈಮಗ್ಗಗಳ ಆಧುನೀಕರಣ ರೂ.2.75ಲಕ್ಷಗಳು | 5.00 |

ಸಭೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2011-12ನೇ ಸಾಲಿಗೆ **ಲಿಂಕ್** ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ **ಕ್ರಿಯಾ ಯೋಜನೆಗೆ** ಸಭೆಯಲ್ಲಿ **ಸರ್ವಾನುಮತದಿಂದ ಅನುಮೋದನೆ ನೀಡಿ** ನಿರ್ಣಯಿಸಲಾಯಿತು.

### 7. ಕೈಗಾರಿಕೆ ಇಲಾಖೆ:

ಉಪ ನಿರ್ದೇಶಕರು(ಪ್ರಭಾರ), ಕೈಗಾರಿಕೆ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2011-12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2851-00-107-0-34<br>ವಿಚಾರಗೋಷ್ಠಿ ಮತ್ತು ವಸ್ತು ಪ್ರದರ್ಶನ | 4.00 |

ಸಭೆಯಲ್ಲಿ ಕೈಗಾರಿಕೆ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2011-12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

| | | |
|---|---|---|
| 2 | 2851–00–107–0–27<br>ಜಿಲ್ಲಾ ಔದ್ಯಮಿಕ ಕೇಂದ್ರಗಳು | 7.00 |
| | ಒಟ್ಟು | 11.00 |

ಉಪ ನಿದೇಶಕರು (ಪ್ರಭಾರ) ಇವರು ಮುಂದುವರೆದು ಮಾತನಾಡುತ್ತಾ, ಹೊಲಿಗೆಯನ್ನು ಕಲಿತಿರುವ ಅರ್ಹ ಫಲಾನುಭವಿಗಳಿಗೆ ಪ್ರಸಕ್ತ ಸಾಲಿಗೆ ಹೊಲಿಗೆ ಮಿಷನ್ ಜೊತೆಗೆ ಮೋಟಾರ್ ಅನ್ನು ಸಹ ನೀಡಲು ಉದ್ದೇಶಿಸಲಾಗಿದ್ದು, ಐಎಸ್‌ಐ ಮಾರ್ಕಿನ ಹೊಲಿಗೆ ಯಂತ್ರವನ್ನು ರೂ.6000/–ಗಳಲ್ಲಿ ನೀಡಲು ಉದ್ದೇಶಿಸಿದ್ದು, ರೂ. 4000/–ಗಳನ್ನು ಇಲಾಖೆಯಿಂದ ನೀಡಲಾಗುವುದು ಉಳಿದ ರೂ.2000/–ಗಳನ್ನು ಫಲಾನುಭವಿಗಳು ಭರಿಸಬೇಕಾಗಿರುತ್ತದೆ ಎಂದು ಸಭೆಗೆ ವಿವರ ನೀಡಿದರು.

8. **ಸಹಕಾರ ಇಲಾಖೆ:**

ಉಪ ನಿಬಂಧಕರು, ಸಹಕಾರ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2011–12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2425–00–101–0–28<br>ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನ | 1.50 |
| 2 | 2425–00–101–0–30<br>ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಸಹಾಯಧನ | 1.50 |
| 3 | 2425–00–101–0–25<br>ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳ | 2.00 |
| | ಒಟ್ಟು | 5.00 |

ಸಭೆಯಲ್ಲಿ ಸಹಕಾರ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2011–12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

9. **ಜಲಾನಯನ ಅಭಿವೃದ್ಧಿ ಇಲಾಖೆ:**

ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಇಲಾಖೆಯಿಂದ ಅನುಷ್ಟಾನ ಮಾಡುವ ಯೋಜನೆಗಳ ಬಗ್ಗೆ ಸಭೆಗೆ ಈ ಕೆಳಕಂಡಂತೆ ವಿವರ ನೀಡಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ರಾಜ್ಯ (ಲಕ್ಷ ರೂಗಳಲ್ಲಿ) | ಕೇಂದ್ರ (ಲಕ್ಷ ರೂಗಳಲ್ಲಿ) | ಒಟ್ಟು (ಲಕ್ಷ ರೂಗಳಲ್ಲಿ) |
|---|---|---|---|---|
| 1 | 2501–02–800–0–02<br>ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ | 10.50 | 31.50 | 42.00 |

ಸಭೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2011–12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ

| | | | | |
|---|---|---|---|---|
| 2 | 2501-02-800-0-03<br>ಸಮಗ್ರ ಬಂಜರು ಭೂಮಿ ಅಭಿವೃದ್ದಿ ಯೋಜನೆ | 2.85 | 31.36 | 34.21 |
| 3 | 2402-00-102-0-26<br>ರಾಷ್ಟ್ರೀಯ ಜಲಾನಯನ ಅಭಿವೃದ್ದಿ ಯೋಜನೆ | 5.858 | 52.722 | 58.580 |
| 4 | 2402-00-102-0-01<br>ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮಗಳು | 0.58 | 0.0 | 0.580 |
| | ಒಟ್ಟು | 19.79 | 115.58 | 135.37 |

ನಿರ್ಣಯಿಸಲಾಯಿತು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಜಲಾನಯನ ಅಭಿವೃದ್ದಿ ಇಲಾಖೆಯ ವತಿಯಿಂದ ಸಣ್ಣ ಹಿಡುವಳಿದಾರರು ಹೊಂದಿರುವ ಜಮೀನಿನಲ್ಲಿಯೂ ಸಹ ಜಲಾನಯನ ಇಲಾಖೆಯ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಕ್ರಮ ವಹಿಸಬೇಕೆಂದು ತಿಳಿಸಿದರು ಮತ್ತು ಇಲಾಖೆಯ ವತಿಯಿಂದ ಅನುಷ್ಠಾನ ಮಾಡಿರುವ ಕಾಮಗಾರಿಗಳ ಪರಿಶೀಲನೆಗೆ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರನ್ನು ಕರೆದುಕೊಂಡು ಹೋಗಲು ದಿನಾಂಕವನ್ನು ನಿಗದಿಪಡಿಸಿ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು.

**10. <u>ಸಾಮಾಜಿಕ ಅರಣ್ಯ ವಿಭಾಗ:</u>**

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಇಲಾಖೆ, ಹಾಸನ ಇವರು ಮಾತನಡುತ್ತಾ, 2011-12ನೇ ಸಾಲಿಗೆ ಸಾಮಾಜಿಕ ಅರಣ್ಯ ವಿಭಾಗಕ್ಕೆ ಲಿಂಕ್ ಪುಸ್ತಕದಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2406-00-101-0-27<br>ವಿಶೇಷ ಅಭಿವೃದ್ದಿ ಯೋಜನೆ | 45.65 |
| 2 | 2406-00-101-0-28<br>ಕಟ್ಟಡಗಳು | 10.00 |
| | ಒಟ್ಟು | 55.65 |

ಸಭೆಯಲ್ಲಿ ಸಾಮಾಜಿಕ ಅರಣ್ಯ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2011-12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಗುರಿಗಳ ಅನುದಾನ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

| | | | |
|---|---|---|---|
| 2 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| | 1. ಪಶುಪಾಲನಾ ಇಲಾಖೆಯ ಪ್ರಸ್ತಾವನೆಗಳಿಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)/37/ಕೈಕಾಸ್ಥಾ/ಪಶುಪಾಲನೆ/ 2011-12 ದಿನಾಂಕ: 03-06-2011ನ್ನು ಸಭೆಯಲ್ಲಿ ಮಂಡಿಸಲಾಯಿತು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. |

<table>
<tr>
<td></td>
<td>ಅನುಮೋದನೆ ನೀಡುವ ಬಗ್ಗೆ.</td>
<td>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಜಿಲ್ಲಾ ಪಂಚಾಯಿತಿ, ಹಾಸನ ಇವರು ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ.<br><br>1. ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕಶೀರ್ಷಿಕೆಯಡಿ ಜೀವರಕ್ಷಕ ಔಷಧಗಳ ಪೂರೈಕೆ-ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ ರೂ.24,74,720.00<br><br>2. ವಿಸ್ತರಣಾ ಘಟಕ ಬಲಪಡಿಸುವುದು ಯೋಜನೆಯಡಿ ಕಾರ್ಯಾಗಾರ ಏರ್ಪಡಿಸುವುದು ರೂ.90000.00<br><br>3. ಇಲಾಖೆಯಲ್ಲಿ ಹೊಸದಾಗಿ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸುವ ಹಾಗೂ ಹಾಲಿ ಕಾರ್ಯನಿರತ ಪಶುವೈದ್ಯಕೀಯ ಸಂಸ್ಥೆಗಳನ್ನು ಉನ್ನತೀಕರಿಸುವ ಬಗ್ಗೆ.</td>
<td>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಕೋರಿರುವಂತೆ ಪ್ರಸ್ತಾವನೆಗಳಿಗೆ ಅನುಮೋದನೆಯನ್ನು ನೀಡಲಾಯಿತು.<br><br>1. ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕಶೀರ್ಷಿಕೆಯಡಿ ಜೀವರಕ್ಷಕ ಔಷಧಗಳ ಪೂರೈಕೆಗೆ ಸಂಬಂಧಿಸಿದಂತೆ, ರೂ.24,74,720.00(ರೂಪಾಯಿ ಇಪ್ಪತ್ತನಾಲಕ್ಕು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಏಳುನೂರ ಇಪ್ಪತ್ತು ಮಾತ್ರ)ಗಳಲ್ಲಿ ಆಯುಕ್ತಾಲಯದಿಂದ ನಿಗದಿಪಡಿಸಿದ ದರಗುತ್ತಿಗೆ ಸಂಸ್ಥೆಗಳಿಂದ ಹಾಗೂ ಭಾರತ ಸರ್ಕಾರದ ಸ್ವಾಮ್ಯದ ಸಂಸ್ಥೆಯಿಂದ ದರಪಟ್ಟಿ ಮುಖೇನ ಅವಶ್ಯ ಔಷಧಿಗಳನ್ನು ನಿಯಮಾನುಸಾರ ಖರೀದಿಸಲು ಮಂಜೂರಾತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br><br>2. ವಿಸ್ತರಣಾ ಘಟಕ ಬಲಪಡಿಸುವುದು ಯೋಜನೆಯಡಿ ಕಾರ್ಯಾಗಾರವನ್ನು ಏರ್ಪಡಿಸಲು ರೂ.90000.00 (ರೂಪಾಯಿ ತೊಂಬತ್ತು ಸಾವಿರ ಮಾತ್ರ)ಗಳಿಗೆ ಅನುಮೋದನೆಯನ್ನು ನೀಡಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br><br>3. ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಈ ಕೆಳಕಂಡಂತೆ ಪಶು ಚಿಕಿತ್ಸಾ ಕೇಂದ್ರಗಳನ್ನು ಉನ್ನತೀಕರಿಸಲು ನಿರ್ಣಯಿಸಲಾಯಿತು.<br><table><tr><td>ಕ್ರಸಂ</td><td>ತಾಲ್ಲೂಕು</td><td>ಪಶು ಚಿಕಿತ್ಸಾ ಕೇಂದ್ರದ ವಿವರ</td></tr><tr><td>1</td><td>ಚನ್ನರಾಯ ಪಟ್ಟಣ</td><td>ಆನೆಕೆರೆ</td></tr></table></td>
</tr>
</table>

| | | |
|---|---|---|
| 2 | ಆಲೂರು | ಪಾಳ್ಯಮತ್ತು ಕುಂದೂರು |
| 3 | ಅರಕಲ ಗೂಡು | ಬಸವಾಪಟ್ಟಣ ಮತ್ತು ಹೆಬ್ಬಾಲೆ |
| 4 | ಅರಸೀಕೆರೆ | ಕೋಳಗುಂದ, ಕೊಂಡವಾಗಿಲು, ಬಾಗೇಶಪುರ |
| 5 | ಬೇಲೂರು | ಅಡಗೂರು, ಬಿಕ್ಕೋಡು, |
| 6 | ಹಾಸನ | ಹೂವಿನಹಳ್ಳಿ ಕಾವಲ್, ಹೆರಗು |
| 7 | ಹೊಳೆನರಸೀ ಪುರ | ಹಳೇಕೋಟೆ, ಮಳಲಿ |
| 8 | ಸಕಲೇಶಪುರ | ಹೊಸೂರು ಮತ್ತು ಉದೇವಾರ |

ಹೊಸದಾಗಿ ಪಶುಚಿಕಿತ್ಸಾ ಕೇಂದ್ರಗಳನ್ನು ಈ ಕೆಳಕಂಡ ಆರಂಭಿಸುವುದು ಅಗತ್ಯವಿದೆಯೆಂದು ಚರ್ಚಿಸಿ ನಿರ್ಣಯಿಸಲಾಯಿತು.

| ಕ್ರಸಂ | ತಾಲ್ಲೂಕು | **ಹೊಸದಾಗಿ ಪ್ರಾರಂಭಿಸಬೇಕಾಗಿರುವ ಗ್ರಾಮದ ವಿವರ** |
|---|---|---|
| 1 | ಆಲೂರು | ಕಾಮತಿ ಕೂಡಿಗೆ |
| 2 | ಬೇಲೂರು | ಹಲ್ಮಿಡಿ ಮತ್ತು ರಾಜನಶಿರಿಯೂರು |
| 3 | ಹಾಸನ | ದುಂಡನಾಯಕನಹಳ್ಳಿ |

ಸುದೀರ್ಘವಾಗಿ ಚರ್ಚಿಸಿ ಹಾಸನ ಜಿಲ್ಲೆಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಪಶು ಚಿಕಿತ್ಸಾ ಕೇಂದ್ರಗಳನ್ನು ಉನ್ನತೀಕರಿಸಲು ಮತ್ತು ಹೊಸದಾಗಿ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ

| | | | |
|---|---|---|---|
| | | | ಸರ್ಕಾರಕ್ಕೆ ಅಗತ್ಯ ಪ್ರಸ್ತಾವನೆಗಳನ್ನು ಸಲ್ಲಿಸಲು ಇಲಾಖಾ ಅಧಿಕಾರಿಗಳಿಗೆ ಸೂಚಿಸಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | 2. ರೇಷ್ಮೆ ಇಲಾಖೆಯ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)37/ಕೃಕೈಸ್ಥಾ/ರೇಷ್ಮೆ/2011-12 ದಿನಾಂಕ: 03-06-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನರವರು ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆಯನ್ನು ಕೋರಿರುತ್ತಾರೆ<br>1. ರೇಷ್ಮೆ ಹುಳುಗಳಿಗೆ ತಗಲುವ ರೋಗಗಳ ನಿಯಂತ್ರಣಕ್ಕಾಗಿ ಸಾಮಾನ್ಯ ಸೋಂಕು ನಿವಾರಕಗಳಾದ ಡೆಕಾಲ್, ಅಸ್ತ್ರಶುಚಿತ್ವಕ್ಕಾಗಿ ಶುಚಿ, ಹಾಸಿಗೆ ಸೋಂಕು ನಿವಾರಕಗಳಾದ ಸಂಜೀವಿನಿ, ನಂದಿಲೆಬೆಕ್ಸ್, ನಂದಿ ಅಮೃತ್, ವೆಟ್‌ಕೇರ್ ವಿಜೇತ ಸಪ್ಲಿಮೆಂಟ್‌ಗಳನ್ನು ಖರೀದಿಸಲು ರೂ.15,79,208.00ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಕೋರಿರುವಂತೆ ರೇಷ್ಮೆ ಹುಳುಗಳಿಗೆ ತಗಲುವ ರೋಗಗಳ ನಿಯಂತ್ರಣಕ್ಕಾಗಿ ಸಾಮಾನ್ಯ ಸೋಂಕು ನಿವಾರಕಗಳಾದ ಡೆಕಾಲ್, ಅಸ್ತ್ರಶುಚಿತ್ವಕ್ಕಾಗಿ ಶುಚಿ, ಹಾಸಿಗೆ ಸೋಂಕು ನಿವಾರಕಗಳಾದ ಸಂಜೀವಿನಿ, ನಂದಿಲೆಬೆಕ್ಸ್, ನಂದಿ ಅಮೃತ್, ವೆಟ್‌ಕೇರ್ ವಿಜೇತ ಸಪ್ಲಿಮೆಂಟ್‌ಗಳನ್ನು ರೂ.15,79,208.00(ರೂಪಾಯಿ ಹದಿನೈದು ಲಕ್ಷದ ಎಪ್ಪತ್ತೊಂಬತ್ತು ಸಾವಿರದ ಎರಡು ನೂರ ಎಂಟು ಮಾತ್ರ)ಗಳಲ್ಲಿ ದರ ಅನುಮೋದನೆಯಾಗಿರುವ ಸಂಸ್ಥೆಗಳಿಂದ ನಿಯಮಾನುಸಾರ ಖರೀದಿಸಲು ಮಂಜೂರಾತಿಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | 3. ಜಲಾನಯನ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಜಲಾನಯನ/2011-12 ದಿನಾಂಕ: 06-06-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಪ್ರಸ್ತಾವನೆಯನ್ನು ಸಲ್ಲಿಸಿ ಅರಣ್ಯ ಮತ್ತು ತೋಟಗಾರಿಕೆ ಘಟಕದ ಕ್ಷೇತ್ರ ವೀಕ್ಷಣೆಗಾಗಿ 2009-10 ಮತ್ತು 2010-11ನೇ ಸಾಲಿಗೆ ಶ್ರೀ ಲಕ್ಷ್ಮೀ ವೆಂಕಟೇಶ್ವರ ಟ್ರಾವೆಲ್ಸ್, ಶಿವಜ್ಯೋತಿ ನಗರ, ಹಾಸನ ಇವರ ಖಾಸಗಿ ವಾಹನವನ್ನು ಮಾಸಿಕ ರೂ.19500/-ಗಳಿಗೆ ಬಾಡಿಗೆ ಆಧಾರದ ಮೇಲೆ ಪಡೆಯಲಾಗಿದ್ದು, 2011-12ನೇ ಸಾಲಿಗೆ ಸದರಿ ವಾಹನವನ್ನು ಅರಣ್ಯ ಮತ್ತು ತೋಟಗಾರಿಕೆ ಘಟಕಗಳ ಕ್ಷೇತ್ರ ವೀಕ್ಷಣೆಗಾಗಿ ಪಡೆಯಲು ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಕೋರಿರುವಂತೆ ಶ್ರೀ ಲಕ್ಷ್ಮೀ ವೆಂಕಟೇಶ್ವರ ಟ್ರಾವೆಲ್ಸ್, ಶಿವಜ್ಯೋತಿ ನಗರ, ಹಾಸನ ಇವರ ಖಾಸಗಿ ವಾಹನವನ್ನು ಮಾಸಿಕ ರೂ.19500/-ಗಳಿಗೆ ಬಾಡಿಗೆ ಆಧಾರದ ಮೇಲೆ ಪಡೆದು ಬಳಕೆ ಮಾಡುತ್ತಿರುತ್ತಾರೆ. 2011-12ನೇ ಸಾಲಿಗೂ ಅರಣ್ಯ ಮತ್ತು ತೋಟಗಾರಿಕೆ ಘಟಕಗಳ ಕ್ಷೇತ್ರ ವೀಕ್ಷಣೆಗಾಗಿ ಪಡೆಯಲು ಮಂಜೂರಾತಿಯನ್ನು ನವೀಕರಿಸಿ ಮುಂದುವರೆಸಲು ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ನಿರ್ಣಯಿಸಲಾಯಿತು. |

| | | | |
|---|---|---|---|
| | 4. ರೇಷ್ಮೆ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೊದನೆ ಯನ್ನು ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)37/ಕೃಕೈಸ್ಥಾ/ರೇಷ್ಮೆ/2011-12 ದಿನಾಂಕ: 07-06-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆರವರು ಸುವರ್ಣ ಭೂಮಿ ಯೋಜನೆಯಡಿ ಹೊಸದಾಗಿ ರೇಷ್ಮೆ ಕೃಷಿ ಕೈಗೊಳ್ಳುವ ರೈತರಿಗೆ ತರಬೇತಿ ನೀಡಲು ತರಬೇತಿದಾರರಿಗೆ ಇಲಾಖಾ ಸಿಬ್ಬಂದಿಗಳಿಗೆ ಹಾಗೂ ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ರೇಷ್ಮೆ ಅಭಿವೃದ್ದಿ ಕುರಿತು ಕೈಪಿಡಿಗಳನ್ನು ಮುದ್ರಿಸಲು ರೂ.22,838.00ಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಕೋರಿರುವಂತೆ ಸುವರ್ಣ ಭೂಮಿ ಯೋಜನೆಯಡಿ ಹೊಸದಾಗಿ ರೇಷ್ಮೆ ಕೃಷಿ ಕೈಗೊಳ್ಳುವ ರೈತರಿಗೆ ತರಬೇತಿ ನೀಡಲು ತರಬೇತಿದಾರರಿಗೆ ಇಲಾಖಾ ಸಿಬ್ಬಂದಿಗಳಿಗೆ ಹಾಗೂ ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ರೇಷ್ಮೆ ಅಭಿವೃದ್ದಿ ಕುರಿತು ಕೈಪಿಡಿಗಳನ್ನು ಮುದ್ರಿಸಲು ರೂ.22,838.00(ರೂಪಾಯಿ ಇಪ್ಪತ್ತೆರಡು ಸಾವಿರದ ಎಂಟು ನೂರ ಮೂವತ್ತೆಂಟು ಮಾತ್ರ)ಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | | ಮತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ಹುಚ್ಚೇಗೌಡ)
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸ